# Sahitya School

Shidlaghatta Road, Near Shirusti Hospital, H Cross.

## ನಿಮ್ಮ ಮಕ್ಕಳ ಆತ್ಮಗೌರವಕ್ಕೆ ನೀವು ಜವಾಬ್ದಾರರಾಗಿರುತ್ತೀರಿ.



- **ನಿಮ್ಮ ಪ್ರತೀ ನಡವಳಿಕೆಗಳನ್ನು ಮಕ್ಕಳು ಸೂಕ್ಷ್ಮವಾಗಿ ಗಮನಿಸುತ್ತಾ ಅನುಕರಿಸುತ್ತಿರುತ್ತಾರೆ.** ನಿಮ್ಮ ಧ್ವನಿ, ನಿಮ್ಮ ಭಾಷೆ ಮತ್ತು ನಿಮ್ಮ ನಡವಳಿಕೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ನಿಮ್ಮ ಸ್ವಭಾವಗಳನ್ನೇ ಅವರು ಅಳವಡಿಸಿಕೊಳ್ಳುವುದರಿಂದ ನೀವು ಅವರಲ್ಲಿ ಸ್ವಾಭಿಮಾನ, ಆತ್ಮಗೌರವ ಬೆಳೆಸಿಕೊಳ್ಳುವಂತೆ ಸದಾ ಪ್ರೇರೇಪಿಸಿ.

- **ನಿಮ್ಮ ಮಗುವಿನ ಸಣ್ಣ ಸಾಧನೆಯನ್ನೂ ಹೊಗಳಿರಿ.** ಹೊಗಳಿಕೆ ನಿಮ್ಮ ಮಗುವಿಗೆ ಖುಷಿ ಉಂಟುಮಾಡುತ್ತದೆ. ಪ್ರತಿದಿನ ಇಂತಹ ಹೊಗಳಿಕೆ ಪಡೆಯಲು ಏನಾದರೂ ಹೊಸದನ್ನು ಮಾಡಬೇಕೆನ್ನುವ ಹಂಬಲ ಮಕ್ಕಳಲ್ಲಿ ಮೂಡಲಿ. ಯಾವಾಗಲೂ ಬೈಯುವುದಕ್ಕಿಂತ ಇದು ಅವರಿಗೆ ಒಳ್ಳೆಯದು.

- **ನಿಮ್ಮ ಮಕ್ಕಳನ್ನು ನಿರುತ್ಸಾಹಗೊಳಿಸಬೇಡಿ.** ನಿಮ್ಮ ಮಕ್ಕಳನ್ನು ಮತ್ತೊಬ್ಬ ಮಗುವಿನೊಂದಿಗೆ ಹೋಲಿಸುವುದು ಬೇಡ.

- **ಹೇಳಿಕೆ ನೀಡುವುದನ್ನು ತಪ್ಪಿಸಿ.** ದೈಹಿಕವಾಗಿ ಶಿಕ್ಷಿಸುವುದಕ್ಕಿಂತ ಅತಿ ಸೂಕ್ಷ್ಮಮಾತುಗಳಲ್ಲಿ ಬೈಯುವುದು ಅಪಾಯಕಾರಿ.

- **ನಿಮ್ಮ ಪದಗಳನ್ನು ಎಚ್ಚರಿಕೆಯಿಂದ ಬಳಸಿ ಮತ್ತು ಸಹಾನುಭೂತಿಯಿಂದಿರಿ.** ಎಲ್ಲರಿಂದಲೂ ತಪ್ಪುಗಳು ಆಕಸ್ಮಿಕವಾಗಿ ಉಂಟಾಗುತ್ತವೆ, ಹಾಗೆಯೇ ತಮ್ಮಿಂದಾದ ತಪ್ಪುಗಳನ್ನೂ ನೀವು ಕ್ಷಮಿಸುತ್ತೀರಿ. ಮತ್ತು ನಿಮ್ಮ ಪ್ರೀತಿಯಲ್ಲಿ ಸ್ವಲ್ಪವೂ ಲೋಪವಾಗುವುದಿಲ್ಲ ಎಂಬುದು ಮಕ್ಕಳಿಗೆ ತಿಳಿಯುವಂತೆ ನಿಮ್ಮ ವರ್ತನೆ ಇರಲಿ.

- **ನಿಮ್ಮ ಉಡುಗೊರೆಗಳು ಉದಾರವಾಗಿರಲಿ.** ನಿಮ್ಮ ಪ್ರೀತಿಯ ಅಪ್ಪುಗೆ ಮತ್ತು ಅಭಿನಂದನೆಗಳು ಮಕ್ಕಳು ಅದ್ಭುತಗಳನ್ನು ಸಾಧಿಸಲು ಪ್ರೇರೇಪಿಸುತ್ತದೆ ಎಂಬುದು ನಿಮಗೆ ತಿಳಿದಿರಲಿ.

**Where Fun Meets Learning**